# ಸಂಪರ್ಕ

ಬಿ.ಎಸ್.ಆರ್.ಪಿ. ಸುದ್ದಿಪತ್ರ...

ಕ ರೈಡ್ ಹೌಸ್ ಜರ್ನಲ್

ಸಂಚಿಕೆ: 09 | ಮಾರ್ಚ್ 2026


## ಕ-ರೈಡ್ ವತಿಯಿಂದ ನಡೆದ ನಾಗರಿಕ ಪಾಲುದಾರರ ಸಂವಾದ ಕಾರ್ಯಕ್ರಮ



ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಕಂಪನಿ (ಕ-ರೈಡ್) ವತಿಯಿಂದ ಜನವರಿ 21, 2026ರ ರಂದು ನಾಗರಿಕ ಪಾಲುದಾರರ (Citizens' Stakeholders) ಸಂವಾದ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮವನ್ನು ಕ-ರೈಡ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಯಿತು. ಇದರ ಮೂಲಕ ಕ-ರೈಡ್ ಪಾರದರ್ಶಕ, ಪಾಲ್ಗೊಳ್ಳುವಿಕೆ ಆಧಾರಿತ ಮತ್ತು ನಾಗರಿಕ ಕೇಂದ್ರಿತ ಮೂಲಸೌಕರ್ಯ ಅಭಿವೃದ್ಧಿಗೆ ತನ್ನ ಬದ್ಧತೆಯನ್ನು ಮತ್ತೊಮ್ಮೆ ದೃಢಪಡಿಸಿದೆ.

ಇನ್ನು ಕಾರ್ಯಕ್ರಮದಲ್ಲಿ ಯೋಜನೆ ಮತ್ತು ಯೋಜನಾ ನಿರ್ದೇಶಕರಾದ ಶ್ರೀ ರಾಜೇಶ್ ಕುಮಾರ್ ಸಿಂಗ್ ಹಾಗೂ ವ್ಯವಹಾರ ಅಭಿವೃದ್ಧಿ ಮತ್ತು ಹಣಕಾಸು ನಿರ್ದೇಶಕರಾದ ಶ್ರೀ ಅವದೇಶ್ ಮೆಹತಾ ಸೇರಿದಂತೆ ಕ-ರೈಡ್‌ನ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಬೆಂಗಳೂರು ಉಪನಗರ ರೈಲು ಯೋಜನೆ (B S R P) ಪ್ರಗತಿ ಕುರಿತು ಮಾಹಿತಿ ಪಡೆಯಲು ನಾಗರಿಕ ಸಂಘಟನೆಗಳು, ನಿವಾಸಿ ಸಂಘಗಳು ಮತ್ತು ಎನ್‌ಜಿಒಗಳ ಪ್ರತಿನಿಧಿಗಳು ಉತ್ಸಾಹದಿಂದ ಭಾಗವಹಿಸಿದರು.

ಇದೆ ವೇಳೆ ಕ-ರೈಡ್ ಕೈಗೊಂಡಿರುವ ಯೋಜನೆಗಳ ಪ್ರಸ್ತುತ ಸ್ಥಿತಿ, ಪ್ರಗತಿ ಹಾಗೂ ಮುಂಬರುವ ಮೈಲುಗಲ್ಲುಗಳ ಕುರಿತು ವಿವರವಾದ ಪ್ರಸ್ತುತಿಗಳು ಮತ್ತು ಚರ್ಚೆಗಳು ನಡೆಯಿತು. ಯೋಜನೆಗಳ ಕಾಲಮಿತಿ, ಯೋಜನಾ ಅಂಶಗಳು ಹಾಗೂ ಅನುಷ್ಠಾನ ಸವಾಲುಗಳ ಬಗ್ಗೆ ನಾಗರಿಕರಿಗೆ ಸಮಗ್ರ ಮಾಹಿತಿ ನೀಡಲಾಯಿತು. ನಂತರ ಮುಕ್ತ ಚರ್ಚಾ ವೇದಿಕೆ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿದವರ ಅಭಿಪ್ರಾಯಗಳು, ಸಲಹೆಗಳು ಹಾಗೂ ಗಮನಾರ್ಹ ಸೂಚನೆಗಳನ್ನು ಸ್ವೀಕರಿಸಲಾಯಿತು.

## ಕ-ರೈಡ್‌ನಲ್ಲಿ 2026ನೇ ಸಾಲಿನ ಗಣರಾಜ್ಯೋತ್ಸವ ಸಂಭ್ರಮ



ಕ-ರೈಡ್ ವತಿಯಿಂದ 2026ರ ಗಣರಾಜ್ಯೋತ್ಸವವನ್ನು ಬೆಂಗಳೂರು ಉಪನಗರ ರೈಲು ಯೋಜನೆಯ ಕಾರಿಡಾರ್-2 ರ ಯಶವಂತಪುರ ರೈಲು ನಿಲ್ದಾಣ ಸಮೀಪ ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಮಾತನಾಡಿದ ಕ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು, ಗಣರಾಜ್ಯೋತ್ಸವವು ಕರ್ತವ್ಯ ಮತ್ತು ಸೇವೆಯ ಮಹತ್ವವನ್ನು ನೆನಪಿಸುವ ದಿನವಾಗಿದೆ ಎಂದು ಹೇಳಿದರು.

ಅವರು ಮಾತನಾಡುತ್ತಾ, ಬೆಂಗಳೂರು ಉಪನಗರ ರೈಲು ಯೋಜನೆಯ ಎಲ್ಲಾ ಕಾರಿಡಾರ್‌ಗಳ ಅಲೈನ್‌ಮೆಂಟ್‌ಗಳಿಗೆ ಅನುಮೋದನೆ ಲಭಿಸಿದ್ದು, ಕಾಮಗಾರಿಗಳು ದೃಢವಾದ ಪ್ರಗತಿಯನ್ನು ಸಾಧಿಸುವ ಹಾದಿಗೆ ಬಂದಿದೆ ಎಂದು ತಿಳಿಸಿದರು. ಕ-ರೈಡ್ ಸಂಸ್ಥೆ ಈಗ ಸಂಪೂರ್ಣವಾಗಿ ಅನುಷ್ಠಾನ ಹಂತದತ್ತ ಮುನ್ನಡೆಯುತ್ತಿದ್ದು, ಯೋಜನೆಯ ಯಶಸ್ವಿ ಕಾರ್ಯಗತಕರಣೆಯ ಮಾರ್ಗದಲ್ಲಿ ದೃಢವಾಗಿ ಸಾಗುತ್ತಿದೆ ಎಂದು ಹೇಳಿದರು.

## ವ್ಯವಸ್ಥಾಪಕ ನಿರ್ದೇಶಕರ ಆಶಯ ನುಡಿ



**ಶ್ರೀ ಲಕ್ಷ್ಮಣ್ ಸಿಂಗ್**
ವ್ಯವಸ್ಥಾಪಕ ನಿರ್ದೇಶಕರು, ಕ ರೈಡ್

ನಮ್ಮ ಎಲ್ಲಾ ಓದುಗರಿಗೂ ಶುಭಕಾಮನೆಗಳು

ಬೆಂಗಳೂರು ಉಪನಗರ ಸಾರಿಗೆ ಯೋಜನೆ (BSTP) ಕಳೆದ ಕೆಲವು ವರ್ಷಗಳಲ್ಲಿ ಹಲವು ಸಂಕೀರ್ಣ ಸವಾಲುಗಳನ್ನು ಎದುರಿಸುತ್ತಾ ಬಂದಿದೆ. ಆದರೆ ಕ-ರೈಡ್ ಟೀಂನ ನಿರಂತರ ಪ್ರಯತ್ನಗಳು, ಪರಿಣಾಮಕಾರಿ ಸಮನ್ವಯ ಮತ್ತು ಪಾಲುದಾರರ ಅಚಲ ಬದ್ಧತೆಯ ಫಲವಾಗಿ, ಈ ಸವಾಲುಗಳ ಬಹುಪಾಲನ್ನು ದಾಟುವಲ್ಲಿ ನಾವು ಮಹತ್ವದ ಪ್ರಗತಿಯನ್ನು ಸಾಧಿಸಿದ್ದೇವೆ ಎಂಬುದನ್ನು ಸಂತೋಷದಿಂದ ಹಂಚಿಕೊಳ್ಳುತ್ತೇನೆ.

ಇತ್ತೀಚಿನ ತಿಂಗಳಲ್ಲಿ ನಾನು ಕಾರಿಡಾರ್-2 (C2) ರ ಸಂಪೂರ್ಣ ಅಲೈನ್‌ಮೆಂಟ್‌ನುದ್ದಕ್ಕೂ ಕಾಲ್ನಡಿಗೆ ಮೂಲಕ ನಡೆದು ಪರಿಶೀಲನೆಗಳನ್ನು ನಡೆಸಿದ್ದೇನೆ. ಈ ಪರಿಶೀಲನೆಗಳು ಅಗತ್ಯವಿರುವ ವಿಷಯಗಳ ಕುರಿತು ನೇರ ಅನುಭವ ಮತ್ತು ಸ್ಪಷ್ಟ ಅರಿವನ್ನು ನೀಡಿವೆ. ವಿವಿಧ ಪಾಲುದಾರ ಇಲಾಖೆಗಳು ಮತ್ತು ಸಂಸ್ಥೆಗಳೊಂದಿಗೆ ಕೇಂದ್ರೀಕೃತ ಪ್ರಯತ್ನಗಳು ಹಾಗೂ ಸಹಕಾರಾತ್ಮಕ ಸಂವಹನದ ಮೂಲಕ ಅನೇಕ ಮಹತ್ವದ ಸಮಸ್ಯೆಗಳನ್ನು ಯಶಸ್ವಿಯಾಗಿ ಪರಿಹರಿಸಲಾಗಿದೆ.

ಇನ್ನು ಇದೇ ಸಮಯದಲ್ಲಿ ನಾವು ಸಾಧಿಸಿರುವ ಪ್ರಮುಖ ಮೈಲಿಗಲ್ಲುಗಳಲ್ಲಿ ಒಂದು ಎಂದರೆ ಭೂಸ್ವಾಧೀನ ಪ್ರಕ್ರಿಯೆಯ ಯಶಸ್ವಿ ಪರಿಹಾರ ಮತ್ತು ಸರಳೀಕರಣ. ಕಾರಿಡಾರ್-2 ಕ್ಕೆ ಅಗತ್ಯವಿರುವ ಶೇಕಡಾ 100 ರಷ್ಟು ಭೂಮಿಯನ್ನು ರೈಲ್ವೆ, ಖಾಸಗಿ, ರಕ್ಷಣಾ ಇಲಾಖೆ ಸೇರಿದಂತೆ ಇತರ ಎಲ್ಲಾ ವಿಭಾಗಗಳಿಂದ ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡಿದ್ದು, ಯಶಸ್ವಿ ಗುತ್ತಿಗೆದಾರರಿಗೆ ಕಾರ್ಯಾರಂಭಕ್ಕಾಗಿ ಹಸ್ತಾಂತರಿಸಲು ಸಿದ್ಧವಾಗಿದೆ ಎಂಬುದನ್ನು ಸಂತೋಷದಿಂದ ತಿಳಿಸುತ್ತೇನೆ.

ಇನ್ನೊಂದು ಹಿತಕರ ಬೆಳವಣಿಗೆಯೆಂದರೆ ನಾಲ್ಕೂ ಕಾರಿಡಾರ್‌ಗಳ ಅಲೈನ್‌ಮೆಂಟ್‌ಗಳಿಗೆ ರೈಲ್ವೆಯಿಂದ ಅನುಮೋದನೆ ಲಭಿಸಿದೆ. ಈ ಮಹತ್ವದ ಹಂತ ಪೂರ್ಣಗೊಂಡಿರುವುದರಿಂದ ಟೆಂಡರ್ ಆಹ್ವಾನ ಹಾಗೂ ಕಾಮಗಾರಿಗಳ ಹಂಚಿಕೆಯ ವೇಳಾಪಟ್ಟಿಯನ್ನು ಕಾರ್ಯರೂಪಕ್ಕೆ ತರಲಾಗಿದ್ದು, ಯೋಜನಾ ಹಂತದಿಂದ ವೇಗವಾದ ಅನುಷ್ಠಾನದ ಹಂತಕ್ಕೆ ಸಾಗುವ ಮಹತ್ವದ ಬದಲಾವಣೆಯನ್ನು ಇದು ಸೂಚಿಸುತ್ತದೆ.

ಮುಂದಿನ ದಿನಗಳಲ್ಲಿ ನಮ್ಮ ಗಮನ ಸಂಪೂರ್ಣವಾಗಿ ವೇಗವನ್ನು ಕಾಪಾಡಿಕೊಂಡು ಆಧುನಿಕ ಉಪನಗರ ರೈಲು ವ್ಯವಸ್ಥೆಯನ್ನು ಯಶಸ್ವಿಯಾಗಿ ಒದಗಿಸುವತ್ತ ಕೇಂದ್ರೀಕೃತವಾಗಿರುತ್ತದೆ. ನಮ್ಮ ಎಲ್ಲಾ ಪಾಲುದಾರರು ಹಾಗೂ ಹಿತೈಷಿಗಳ ನಿರಂತರ ಬೆಂಬಲಕ್ಕೆ ನಾನು ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮುಂದಿನ ತಿಂಗಳಲ್ಲಿ ಇನ್ನೂ ಅನೇಕ ಮಹತ್ವದ ಸಾಧನೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ನಿರೀಕ್ಷೆಯಲ್ಲಿದ್ದೇನೆ.

# ಭೇಟಿಗಳು ಮತ್ತು ಪರಿಶೀಲನೆಗಳು





ಫೆಬ್ರವರಿ 13, 2026 ರಂದು, ಕ-ರೈಡ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ರೈಲ್ವೆ ಮಂಡಳಿ ಸದಸ್ಯರು (ಮೂಲಭೂತಸೌಕರ್ಯ) ಹಾಗೂ ಭಾರತ ಸರ್ಕಾರದ ಎಕ್ಸ್-ಆಫೀಶಿಯೊ ಕಾರ್ಯದರ್ಶಿಯಾದ ಶ್ರೀ ವಿವೇಕ್ ಕುಮಾರ್ ಗುಪ್ತ ಅವರನ್ನು ನವದೆಹಲಿಯಲ್ಲಿ ಭೇಟಿ ಮಾಡಿ, ಅವರು ಹೊಸ ಜವಾಬ್ದಾರಿಯನ್ನು ವಹಿಸಿಕೊಂಡಿರುವುದಕ್ಕಾಗಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಶ್ರೀ ಲಕ್ಷ್ಮಣ್ ಸಿಂಗ್ ಬೆಂಗಳೂರು ಉಪನಗರ ರೈಲು ಯೋಜನೆ (BSRP) ಯ ಪ್ರಗತಿ ಹಾಗೂ ಭವಿಷ್ಯ ಯೋಜನೆಗಳ ಕುರಿತು ವಿವರಿಸಿದರು. ಬೆಂಗಳೂರು ನಗರದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಮಹತ್ವದ ಹಾಗೂ ಪರಿವರ್ತನಾತ್ಮಕವಾದ ಈ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸುವಲ್ಲಿ ಸಂಪೂರ್ಣ ಸಹಕಾರ ಮತ್ತು ಸಮನ್ವಯವನ್ನು ಒದಗಿಸುವುದಾಗಿ ಸದಸ್ಯರು ಭರವಸೆ ನೀಡಿದರು.

ಫೆಬ್ರವರಿ 13, 2026 ರಂದು, ಕ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ರೈಲ್ವೆ ಮಂಡಳಿ ಸದಸ್ಯರು (ಹಣಕಾಸು) ಹಾಗೂ ಭಾರತ ಸರ್ಕಾರದ ಎಕ್ಸ್-ಆಫೀಶಿಯೊ ಕಾರ್ಯದರ್ಶಿಯಾದ ಶ್ರೀಮತಿ ಮಂಜುಷಾ ಜೈನ್ ಅವರನ್ನು ನವದೆಹಲಿಯಲ್ಲಿ ಭೇಟಿ ಮಾಡಿದರು. ಈ ಸಭೆಯಲ್ಲಿ ಬೆಂಗಳೂರು ಉಪನಗರ ರೈಲು ಯೋಜನೆಗೆ ಸಂಬಂಧಿಸಿದ ಹಣಕಾಸು ಯೋಜನೆ ಹಾಗೂ ಸಮಯೋಚಿತ ಸಂಪನ್ಮೂಲ ಸಂಗ್ರಹಣೆ ಕುರಿತಂತೆ ಚರ್ಚೆ ನಡೆಯಿತು. ಬಿಎಸ್‌ಆರ್‌ಪಿ ಯೋಜನೆಯನ್ನು ಮುಂದುವರಿಸುವಲ್ಲಿ ನಿರಂತರ ಸಹಕಾರ ನೀಡುವುದಾಗಿ ಸದಸ್ಯರು ಭರವಸೆ ನೀಡಿದರು.





ಜನವರಿ 31, 2026 ರಂದು, ಕ-ರೈಡ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಬಿಎಸ್‌ಆರ್‌ಪಿ ಯೋಜನೆಯ ಕಾರಿಡಾರ್–4 (ಕನಕ ಲೈನ್) ನಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸಿದರು. ಚಿನ್ನಪ್ಪನಹಳ್ಳಿ (Lc–134), ಕೊಡತಿ ಗೇಟ್ (LC–130), ಹುಸ್ಕೂರು (LC–127), ಸಿಂಗೆನ ಅಗ್ರಹಾರ (LC–125) ಮಟ್ಟದ ಕ್ರಾಸಿಂಗ್‌ಗಳಲ್ಲಿ ರಸ್ತೆ ಮೇಲ್ಸೇತುವೆ (ROB) ನಿರ್ಮಾಣ ಹಾಗೂ ಚಿಂತಾಮಣಿ ಮಡಿವಾಳ (LC–126) ನಲ್ಲಿ ರಸ್ತೆ ಅಡಿಸೇತುವೆ (RUB) ನಿರ್ಮಾಣದ ಲೆವೆಲ್ ಕ್ರಾಸಿಂಗ್‌ಗಳ ನಿವಾರಣೆಗೆ ಸಂಬಂಧಿಸಿದ ಕಾಮಗಾರಿಗಳ ಪ್ರಗತಿಯನ್ನು ಅವರು ಅವಲೋಕಿಸಿದರು.

ಈ ಲೆವೆಲ್ ಕ್ರಾಸಿಂಗ್‌ಗಳ ನಿವಾರಣೆ ಕಾರಿಡಾರ್–4ರ ಕಾರ್ಯಾಚರಣೆಗೆ ಅಗತ್ಯವಾಗಿರುವುದರ ಜೊತೆಗೆ ಸಾರ್ವಜನಿಕರಿಗೆ ಮಹತ್ತರ ಅನುಕೂಲ ಒದಗಿಸುತ್ತದೆ. ಪ್ರಸ್ತಾವಿತ ROB/RUB ಗಳಿಗಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗೊಳಿಸಿ, ಯೋಜನೆಯ ನಿಗದಿತ ವೇಳಾಪಟ್ಟಿಗೆ ಕಟ್ಟುನಿಟ್ಟಾಗಿ ಅನುಸರಿಸುವಂತೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜನವರಿ 31, 2026ರಂದು, ಕ-ರೈಡ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಕಾರಿಡಾರ್–4 (ಕನಕ ಲೈನ್) ರ ಹುಸ್ಕೂರು ಬಿಎಸ್‌ಆರ್‌ಪಿ ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ನಿಲ್ದಾಣ ಬಾಕ್ಸ್ ಕಾಮಗಾರಿಗಳಲ್ಲಿ ಶೇ.90ರಷ್ಟು ಅಡಿಪಾಯ ಕಾರ್ಯ ಪೂರ್ಣಗೊಂಡಿದ್ದು, ಕಂಬಗಳ ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿ ಇರುವುದನ್ನು ಅವರು ಪರಿಶೀಲಿಸಿದರು. ಕಾಮಗಾರಿಗಳ ವೇಗವನ್ನು ಹೆಚ್ಚಿಸಲು ಗುತ್ತಿಗೆದಾರರು ಹೆಚ್ಚಿನ ಸಂಪನ್ಮೂಲಗಳನ್ನು ನಿಯೋಜಿಸುವಂತೆ ಅವರು ಸೂಚಿಸಿದರು.









ಫೆಬ್ರವರಿ 4, 2026 ರಂದು, ಕ-ರೈಡ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಬಿಎಸ್‌ಆರ್‌ಪಿ ಯೋಜನೆಯ ಕಾರಿಡಾರ್–4 (ಕನಕ ಲೈನ್)ನ ಆದ್ಯತೆ–1 ವಿಭಾಗ ಬೆನ್ನಿಗಾನಹಳ್ಳಿಯಿಂದ ಚನ್ನಸಂದ್ರವರೆಗೆ (BSRP ಚೈನ್‌ಜ್ 22+386 ರಿಂದ 33+947) ಪರಿಶೀಲಿಸಿದರು. ಬೆನ್ನಿಗಾನಹಳ್ಳಿ ನಿಲ್ದಾಣವು ಕಾರಿಡಾರ್–2 ಮತ್ತು ಕಾರಿಡಾರ್–4 ನಡುವಿನ ಪ್ರಮುಖ ವಿನಿಮಯ ನಿಲ್ದಾಣವಾಗಿರುತ್ತದೆ.

ಈ ವಿಭಾಗವು ಎಲಿವೇಟೆಡ್ ಆಗಿದ್ದು, ಸುಮಾರು 500 ಮೀಟರ್ ಉದ್ದದಲ್ಲಿ ಬಿಎಂಆರ್‌ಸಿಎಲ್ ಜೊತೆ ಸಾಮಾನ್ಯ ಕಾರಿಡಾರ್ ಹೊಂದಿದೆ. ಇಲ್ಲಿ ಬಿಎಂಆರ್‌ಸಿಎಲ್ ಲೆವೆಲ್–2ರಲ್ಲಿ ಮತ್ತು ಬಿಎಸ್‌ಆರ್‌ಪಿ ಲೆವೆಲ್–1ರಲ್ಲಿ ಸಾಗಲಿದೆ.

ಇದೇ ವೇಳೆ ಲಕ್ಷ್ಮಣ್ ಸಿಂಗ್ ಚನ್ನಸಂದ್ರ ಬಿಎಸ್‌ಆರ್‌ಪಿ ನಿಲ್ದಾಣದ (ಚೈನ್‌ಜ್ 24+005 ರಿಂದ 24+210) ಕಾಮಗಾರಿಗಳನ್ನು ಪರಿಶೀಲಿಸಿ, ಅಲ್ಲಿ ನಡೆಯುತ್ತಿರುವ ಕಾಸ್ಟ್-ಇನ್-ಸಿಟು ಆರ್‌ಸಿಸಿ ಬಾಕ್ಸ್ ನಿರ್ಮಾಣ ಚಟುವಟಿಕೆಗಳನ್ನು ಅವಲೋಕಿಸಿದರು. ಕಾಮಗಾರಿಗಳ ಗುಣಮಟ್ಟ ಹಾಗೂ ಸಮಯಪಾಲನೆಗೆ ವಿಶೇಷ ಗಮನ ನೀಡುವಂತೆ ಅವರು ನಿರ್ದೇಶನ ನೀಡಿದರು.

(ಮುಂದುವರೆದಿದೆ...)

# ಭೇಟಿಗಳು ಮತ್ತು ಪರಿಶೀಲನೆಗಳು








ಭಾರತೀಯ ರೈಲ್ವೆ ವತಿಯಿಂದ ಕಾರಿಡಾರ್-1 / ಸಂಪಿಗೆ ಮಾರ್ಗ ( ಬೆಂಗಳೂರು ನಗರ ರೈಲು ನಿಲ್ದಾಣದಿಂದ ದೇವನಹಳ್ಳಿ ವರೆಗೆ) ಅಲೈನ್‌ಮೆಂಟ್‌ನ್ನು ಅಂತಿಮಗೊಳಿಸಿ ಅನುಮೋದನೆ ನೀಡಿದ ಹಿನ್ನಲೆಯಲ್ಲಿ, ಕ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ದಿನಾಂಕ 15 ಜನವರಿ 2026 ರಂದು ವಿಮಾನ ನಿಲ್ದಾಣ ಸಂಪರ್ಕ ಅಲೈನ್‌ಮೆಂಟ್ ಕುರಿತು ಸಮಗ್ರ ಕ್ಷೇತ್ರ ಪರಿಶೀಲನೆಯನ್ನು ನಡೆಸಿದರು.

ಪರಿಶೀಲನೆಯ ವೇಳೆ, ಭೂಸ್ವಾಧೀನ ಪ್ರಕ್ರಿಯೆ ಸಮಯಮಿತಿಯಲ್ಲಿ ಪೂರ್ಣಗೊಳಿಸಲು ಅನುಕೂಲವಾಗುವಂತೆ ನಿಲ್ದಾಣ ಯೋಜನಾ ಚಟುವಟಿಕೆಗಳನ್ನು ತಕ್ಷಣ ಆರಂಭಿಸಬೇಕು ಎಂದು ಸೂಚಿಸಿದರು. ಅಲ್ಲದೆ ಖಾಸಗಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಎಲ್ಲ ವಿಭಾಗಗಳು ಸಮನ್ವಯದೊಂದಿಗೆ, ಕಾಲಬದ್ಧ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಭೂಸ್ವಾಧೀನ ವಿಭಾಗಕ್ಕೆ ನಿರ್ದೇಶನ ನೀಡಿದರು.

ಯೋಜನೆಯ ತಂತ್ರಾತ್ಮಕ ಮಹತ್ವವನ್ನು ಒತ್ತಿ ಹೇಳಿದ ಲಕ್ಷ್ಮಣ್ ಸಿಂಗ್ ಅವರು ದೇಶದಲ್ಲೇ ಅತಿವೇಗವಾಗಿ ಬೆಳೆಯುತ್ತಿರುವ ನಗರವಾದ ಬೆಂಗಳೂರಿಗೆ ಭವಿಷ್ಯೋನ್ಮುಖ ಹಾಗೂ ಬಲಿಷ್ಠ ಸಾರಿಗೆ ಮೂಲಸೌಕರ್ಯದ ಅಗತ್ಯವಿದೆ ಎಂದು ತಿಳಿಸಿದರು. ವಿಮಾನ ನಿಲ್ದಾಣ ಮಾರ್ಗವು ಅತ್ಯಂತ ಮಹತ್ವದ ಮತ್ತು ಬಹುಕಾಲದ ನಿರೀಕ್ಷೆಯಲ್ಲಿರುವ ಮಾರ್ಗವಾಗಿದ್ದು, ನಗರ ಚಲನವಲನವನ್ನು ಗಣನೀಯವಾಗಿ ಸುಧಾರಿಸುವ ಸಾಮರ್ಥ್ಯ ಹೊಂದಿದೆ ಎಂದು ಅವರು ಅಭಿಪ್ರಾಯಪಟ್ಟರು. ಈ ಮಹತ್ವದ ಮೂಲಸೌಕರ್ಯ ಯೋಜನೆಯನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಲು ಎಲ್ಲ ಸಂಬಂಧಿತ ಅಧಿಕಾರಿಗಳು ಯುದ್ಧೋನ್ಮಾದದಲ್ಲಿ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.



ಜನವರಿ, 14, 2026 ರಂದು, ಕ-ರೈಡ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್, ಕ-ರೈಡ್‌ನ ನಿರ್ದೇಶಕರು (ಯೋಜನೆ ಮತ್ತು ಯೋಜನಾ), ಸಾಮಾನ್ಯ ಸಲಹೆಗಾರರು (G C) ಹಾಗೂ ಗುತ್ತಿಗೆದಾರರೊಂದಿಗೆ ಬಿಎಸ್‌ಆರ್‌ಪಿಯ ಕಾರಿಡಾರ್-2 / ಮಲ್ಲಿಗೆ ಮಾರ್ಗದ ಬಾಣಸವಾಡಿಯಿಂದ ಕಸ್ತೂರಿನಗರದವರೆಗೆ ನಿಲ್ದಾಣ ಕಾರ್ಯಗಳು ಹಾಗೂ ಅಲೈನ್‌ಮೆಂಟ್ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಅವರು ಚೇ. 4.000 ರಿಂದ 9.800 ಕಿ.ಮೀ. ವರೆಗೆ (ಒಟ್ಟು 3.200 ಕಿ.ಮೀ.) ಕಾಲ್ನಡಿಗೆ ಮೂಲಕ ಪರಿಶೀಲನೆ ನಡೆಸಿದ್ದು, ಬ್ಯಾಂಕ್‌ಮೆಂಟ್‌ನ ಭೂಕಾರ್ಯ, ಅರ್ಥ್ ರಿಟೈನಿಂಗ್ ಸ್ಟ್ರಕ್ಚರ್ (ERS), ಕಿರು ಸೇತುವೆಗಳು ಹಾಗೂ RUBಗಳಂತಹ ಅಟ್‌ಗ್ರೇಡ್ ಕಾರ್ಯಗಳನ್ನು ಪರಿಶೀಲಿಸಿದರು. ಅಲೈನ್‌ಮೆಂಟ್ ಮತ್ತು ನಿಲ್ದಾಣ ಸ್ಥಳಗಳ ಸಾಧ್ಯತೆಯನ್ನು ಪರಿಶೀಲಿಸಿ, ನಿಗದಿತ ಕಾಲಮಿತಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.





(ಮುಂದುವರೆದಿದೆ...)

# ಬೇಟಿಗಳು ಮತ್ತು ಪರಿಶೀಲನೆಗಳು





ಜನವರಿ, 30, 2026ರಂದು, ಕ-ರೈಡ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಸೋಲದೇವನಹಳ್ಳಿ ಡಿಪೋ ಸ್ಥಳಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ

- ಬಿಎಸ್ಆರ್‌ಪಿ ಚಿಕ್ಕಬಾಣಾವರ ನಿಲ್ದಾಣದಿಂದ ಡಿಪೋ ಸಂಪರ್ಕ,
- ಸಂಪರ್ಕಕ್ಕೆಸಂಬಂಧಿಸಿದ ಭೂಸ್ವಾಧೀನದ ಸ್ಥಿತಿ,
- ಅಕ್ರಮ ಪ್ರವೇಶ/ಆಕ್ರಮಣಗಳಿಂದ ಉಂಟಾದ ಗಡಿ ಸಮಸ್ಯೆಗಳು

ಇವನ್ನೆಲ್ಲಾ ವಿವರವಾಗಿ ಪರಿಶೀಲಿಸಿದರು. ಡಿಪೋ ಕಾರ್ಯಗಳನ್ನು ವೇಗವಾಗಿ ಮುಂದುವರಿಸಲು ತಕ್ಷಣದ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜನವರಿ, 31, 2026ರಂದು, ಅವರು ಕಾರಿಡಾರ್-4 / ಕನಕ ಮಾರ್ಗದ ಹುಸ್ಕೂರು ಬಿಎಸ್ಆರ್‌ಪಿ ನಿಲ್ದಾಣಕ್ಕೆ ಭೇಟಿ ನೀಡಿ, ನಡೆಯುತ್ತಿರುವ ಮೇನ್ ಬಾಕ್ಸ್ (ವರ್ಕ) ಕಾರ್ಯಗಳನ್ನು ಪರಿಶೀಲಿಸಿದರು. ನಿಲ್ದಾಣ ಬಾಕ್ಸ್‌ನ ಅಡಿಪಾಯ ಕಾರ್ಯಗಳು ಸುಮಾರು 90% ಪೂರ್ಣಗೊಂಡಿದ್ದು, ಕಾಲಮ್ ಕಾರ್ಯಗಳು ಪ್ರಗತಿಯಲ್ಲಿ ಇರುವುದನ್ನು ಪರಿಶೀಲಿಸಿ, ಹೆಚ್ಚಿನ ಸಂಪನ್ಮೂಲಗಳನ್ನು ನಿಯೋಜಿಸಿ ಕಾರ್ಯಗಳನ್ನು ತ್ವರಿತಗೊಳಿಸುವಂತೆ ಗುತ್ತಿಗೆದಾರರಿಗೆ ನಿರ್ದೇಶನ ನೀಡಿದರು.










ಫೆಬ್ರವರಿ,10, 2026ರಂದು, ಕ-ರೈಡ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರು ಕಾರಿಡಾರ್-4 / ಕನಕ ಮಾರ್ಗದ ಚನ್ನಸಂದ್ರ, (BSRP ಚೇ. 24+400) ರಿಂದ ಹೊರಮಾವು ನಿಲ್ದಾಣ (BSRP ಚೇ. 26+075)ವರೆಗೆ ನಡೆಯುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸಿದರು. ಈ ವೇಳೆ ಅಗತ್ಯವಿರುವ ಭೂಸ್ವಾಧೀನದ ಸ್ಥಿತಿಯನ್ನು ವಿಮರ್ಶಿಸಿ, ಉಳಿದಿರುವ ಭೂಸ್ವಾಧೀನವನ್ನು ಆದಷ್ಟು ಶೀಘ್ರದಲ್ಲಿ ಪೂರ್ಣಗೊಳಿಸುವಂತೆ ಭೂಸ್ವಾಧೀನ ತಂಡಕ್ಕೆ ಸೂಚಿಸಿದರು. ಹೊರಮಾವು ನಿಲ್ದಾಣದಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸಿ, ನಿಲ್ದಾಣ ನಿರ್ಮಾಣ ಕಾರ್ಯಗಳನ್ನು ತಕ್ಷಣ ಆರಂಭಿಸುವಂತೆ ಗುತ್ತಿಗೆದಾರರಿಗೆ ನಿರ್ದೇಶನ ನೀಡಿದರು.



# ನಿಲ್ದಾಣ ಕಾಮಗಾರಿಗಳ ಪ್ರಗತಿ

## ಕಾರಿಡಾರ್ 2/ಮಲ್ಲಿಗೆ ಲೈನ್: ನಿಲ್ದಾಣ ಕಾಮಗಾರಿ ಪ್ಯಾಕೇಜ್ ಗಳು C2A ಮತ್ತು C2B




**ಪ್ಯಾಕೇಜ್-C2A:** ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್ಆರ್ಪಿ)ಯ ಕಾರಿಡಾರ್-2 ಅಡಿಯಲ್ಲಿ ಬೆನ್ನಿಗನಹಳ್ಳಿ, ಕಸ್ತೂರಿನಗರ, ಸೇವಾನಗರ, ಬಾಣಸವಾಡಿ, ನಾಗವಾರ, ಕನಕನಗರ, ಹೆಬ್ಬಾಳ ಹಾಗೂ ಮತ್ತಿಕೆರೆ ಸ್ಥಳಗಳಲ್ಲಿ ಒಟ್ಟು ಎಂಟು (08) ನಿಲ್ದಾಣಗಳ ನಿರ್ಮಾಣ ಕಾರ್ಯನಡೆಯುತ್ತಿದೆ. ಇದರಲ್ಲಿ 1 ಎಲಿವೇಟೆಡ್ ಇಂಟರ್‌ಚೇಂಜ್, 3 ಎಲಿವೇಟೆಡ್ ನಿಲ್ದಾಣಗಳು ಹಾಗೂ 4 ಅಟ್-ಗ್ರೇಡ್ ನಿಲ್ದಾಣಗಳು ಸೇರಿರುತ್ತವೆ. ಈ ಪ್ಯಾಕೇಜ್‌ನಡಿ ಸಿವಿಲ್ ಹಾಗೂ ಸ್ಟ್ರಕ್ಚರಲ್ (Civil & Structural) ಕೆಲಸಗಳು, ಪ್ರವೇಶ/ನಿರ್ಗಮನ ರಚನೆಗಳು, ಉಕ್ಕಿನ ಫುಟ್ ಓವರ್ ಬ್ರಿಡ್ಜ್‌ಗಳು (FOB), ರೂಫ್ ರಚನೆಗಳು, ಪ್ರಿ-ಎಂಜಿನಿಯರ್ಡ್ ಬಿಲ್ಡಿಂಗ್ (PEB) ಕಾರ್ಯಗಳು, ವಾಸ್ತುಶಿಲ್ಪ ಪೂರ್ಣತೆಗಳು, ಪ್ಲಂಬಿಂಗ್, ವಿದ್ಯುತ್ ಹಾಗೂ ಯಾಂತ್ರಿಕ (E&M) ಕೆಲಸಗಳು, ವಿವರವಾದ ವಿನ್ಯಾಸ ಮತ್ತು ಸಲಹೆಗಾರಿಕೆ (Detailed Design & Consultancy – DDC) ಸೇರಿದಂತೆ ಎಲ್ಲಾ ಸಂಬಂಧಿತ ಸಹಾಯಕ ಕೆಲಸಗಳು ಒಳಗೊಂಡಿರುತ್ತವೆ. ಈ ಕಾರ್ಯಕ್ಕೆ ಸಂಬಂಧಿಸಿದ ಒಪ್ಪಂದವನ್ನು 31.12.2024ರಂದು ಎನ್‌ಸಿಸಿ ಲಿಮಿಟೆಡ್ ಸಂಸ್ಥೆಯೊಂದಿಗೆ (ಪ್ರಸ್ತುತ ಹೆಸರು: ಎನ್‌ಸಿಸಿ ಲಿಮಿಟೆಡ್) ಅನುಷ್ಠಾನಗೊಳಿಸಲಾಗಿದೆ. ಈ ಪ್ಯಾಕೇಜ್‌ನ ಪೂರ್ಣಗೊಳಿಸುವ ಅವಧಿ 24 ತಿಂಗಳುಗಳು ಆಗಿರುತ್ತದೆ.

### 1 ಕಸ್ತೂರಿ ನಗರ


| ವಿವರಣೆ | ಪ್ರಾಥಮಿಕ ಕೆಲಸಗಳು | ರಾಫ್ಟ್ ಪಿಸಿಸಿ | ರಾಫ್ಟ್ ಆರ್‌ಸಿಸಿ | ಪಿಯರ್ |
|---|---|---|---|---|
| ವ್ಯಾಪ್ತಿ | 205m | 205m | 205m | 26 |
| ಪೂರ್ಣಗೊಂಡಿದೆ | 205m | 205m | 205m | 26 |
| ಪೂರ್ಣಗೊಂಡ ಶೇಕಡಾವಾರು | 100% | 100% | 100% | 100% |



### 2 ಸೇವಾನಗರ

| ವಿವರಣೆ | ಪ್ರಾಥಮಿಕ ಕೆಲಸಗಳು | ರಾಫ್ಟ್ ಪಿಸಿಸಿ | ರಾಫ್ಟ್ ಆರ್‌ಸಿಸಿ | ಪಿಯರ್ |
|---|---|---|---|---|
| ವ್ಯಾಪ್ತಿ | 205m | 205m | 205m | 26 |
| ಪೂರ್ಣಗೊಂಡಿದೆ | ಪ್ರಗತಿಯಲ್ಲಿದೆ | ಇನ್ನೂ ಪ್ರಾರಂಭಿಸಬೇಕಾಗಿದೆ | ಇನ್ನೂ ಪ್ರಾರಂಭಿಸಬೇಕಾಗಿದೆ | ಇನ್ನೂ ಪ್ರಾರಂಭಿಸಬೇಕಾಗಿದೆ |
| ಪೂರ್ಣಗೊಂಡ ಶೇಕಡಾವಾರು | ಪ್ರಗತಿಯಲ್ಲಿದೆ | ಇನ್ನೂ ಪ್ರಾರಂಭಿಸಬೇಕಾಗಿದೆ | ಇನ್ನೂ ಪ್ರಾರಂಭಿಸಬೇಕಾಗಿದೆ | ಇನ್ನೂ ಪ್ರಾರಂಭಿಸಬೇಕಾಗಿದೆ |





(ಮುಂದುವರೆದಿದೆ...)

# ನಿಲ್ದಾಣ ಕಾಮಗಾರಿಗಳ ಪ್ರಗತಿ

## 3 ಬಾಣಸವಾಡಿ

| ವಿವರಣೆ | ಪ್ರಾಥಮಿಕ ಕೆಲಸಗಳು | ರಾಫ್ಟ್ ಪಿಸಿಸಿ | ರಾಫ್ಟ್ ಆರ್‌ಸಿಸಿ | ಪಿಯರ್ |
|---|---|---|---|---|
| ವ್ಯಾಪ್ತಿ | 205m | 205m | 205m | 26 |
| ಪೂರ್ಣಗೊಂಡಿದೆ | 205m | 100m | 56m | ಇನ್ನೂ ಪ್ರಾರಂಭಿಸಬೇಕಾಗಿದೆ |
| ಪೂರ್ಣಗೊಂಡ ಶೇಕಡಾವಾರು | 100% | 49% | 27% | ಇನ್ನೂ ಪ್ರಾರಂಭಿಸಬೇಕಾಗಿದೆ |



## 4 ಹೆಬ್ಬಾಳ

| ವಿವರಣೆ | ಪ್ರಾಥಮಿಕ ಕೆಲಸಗಳು | ರಾಫ್ಟ್ ಪಿಸಿಸಿ | ರಾಫ್ಟ್ ಆರ್‌ಸಿಸಿ | ಪಿಯರ್ |
|---|---|---|---|---|
| ವ್ಯಾಪ್ತಿ | 205m | 205m | 205m | 26 |
| ಪೂರ್ಣಗೊಂಡಿದೆ | 205m | 60m | 21m | ಇನ್ನೂ ಪ್ರಾರಂಭಿಸಬೇಕಾಗಿದೆ |
| ಪೂರ್ಣಗೊಂಡ ಶೇಕಡಾವಾರು | 100% | 30% | 10% | ಇನ್ನೂ ಪ್ರಾರಂಭಿಸಬೇಕಾಗಿದೆ |





**ಪ್ಯಾಕೇಜ್–C2B:** ಬೆಂಗಳೂರು ಉಪನಗರ ರೈಲು ಯೋಜನೆ (BSRP)ಯ ಕಾರಿಡಾರ್–2ರ ಅಡಿಯಲ್ಲಿ ಯಶವಂತಪುರ, ಶೆಟ್ಟಿಹಳ್ಳಿ, ಮ್ಯಾದರಹಳ್ಳಿ ಹಾಗೂ ಚಿಕ್ಕಬಾಣಾವರ ಸ್ಥಳಗಳಲ್ಲಿ ಒಟ್ಟು ನಾಲ್ಕು (04) ನಿಲ್ದಾಣಗಳ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ. ಇದರಲ್ಲಿ 1 ಎಲಿವೇಟೆಡ್ ನಿಲ್ದಾಣ , 1 ಎಲಿವೇಟೆಡ್ ಇಂಟರ್‌ಚೇಂಜ್ ನಿಲ್ದಾಣ ಹಾಗೂ 2 ಅಟ್–ಗ್ರೇಡ್ ನಿಲ್ದಾಣಗಳು ಸೇರಿವೆ. ಈ ಪ್ಯಾಕೇಜ್‌ನಡಿ ಸುಮಾರು 500 ಮೀಟರ್ ಉದ್ದದ ಎಲಿವೇಟೆಡ್ ವಯಾಡಕ್ಟ್ ನಿರ್ಮಾಣ ಹಾಗೂ ಸೋಲದೇವನಹಳ್ಳಿ ಡೆಪೋ ಕಡೆಗೆ ಇಳಿಜಾರು (ಡೌನ್ ರ್ಯಾಂಪ್) ನಿರ್ಮಾಣವೂ ಕೂಡ ಒಳಗೊಂಡಿರುತ್ತದೆ. ಇದರ ಜೊತೆಗೆ ಸಿವಿಲ್ ಮತ್ತು ಸ್ಟ್ರಕ್ಚರಲ್ ಕೆಲಸಗಳು, ಪ್ರವೇಶ/ನಿರ್ಗಮನ ರಚನೆಗಳು, ಉಕ್ಕಿನ ಫುಟ್ ಓವರ್ ಬ್ರಿಡ್ಜ್‌ಗಳು (FOB), ರೂಫ್ ರಚನೆಗಳು, ಪ್ರೀ–ಎಂಜಿನಿಯರ್ಡ್ ಬಿಲ್ಡಿಂಗ್ (PEB) ಕೆಲಸಗಳು, ವಾಸ್ತುಶಿಲ್ಪ ಪೂರ್ಣತೆಗಳು, ಪ್ಲಂಬಿಂಗ್, ಫಸಾಡ್, ವಿದ್ಯುತ್ ಹಾಗೂ ಯಾಂತ್ರಿಕ (E&M) ಕೆಲಸಗಳು ಮತ್ತು ವಿವರವಾದ ವಿನ್ಯಾಸ ಹಾಗೂ ಸಲಹೆಗಾರಿಕೆ (Detailed Design & Consultancy – DDC) ಸೇರಿದಂತೆ ಎಲ್ಲಾ ಸಂಬಂಧಿತ ಸಹಾಯಕ ಕೆಲಸಗಳು ಒಳಗೊಂಡಿರುತ್ತವೆ. ಈ ಕಾರ್ಯಕ್ಕೆ ಸಂಬಂಧಿಸಿದ ಒಪ್ಪಂದವನ್ನು 23.04.2025ರಂದು ಐಟಿಡಿ ಸಿಮೆಂಟೇಶನ್ ಇಂಡಿಯಾ ಲಿಮಿಟೆಡ್ ಸಂಸ್ಥೆಯೊಂದಿಗೆ (ಪ್ರಸ್ತುತ ಹೆಸರು: CEMINDIA Projects Ltd.) ಅನುಷ್ಠಾನಗೊಳಿಸಲಾಗಿದೆ. ಈ ಪ್ಯಾಕೇಜ್‌ನ ಪೂರ್ಣಗೊಳಿಸುವ ಅವಧಿ 24 ತಿಂಗಳುಗಳು ಆಗಿರುತ್ತದೆ.

## 5 ಯಶವಂತಪುರ

| ವಿವರಣೆ | ಪ್ರಾಥಮಿಕ ಕೆಲಸಗಳು | ಡಿ ವಾಲ್ (ಸಂಖ್ಯೆಗಳು) | ಬ್ಯಾರೆಟ್ ಕಾಲಮ್ (ಸಂಖ್ಯೆಗಳು) | ನೆಲ ಮಹಡಿಯ ಚಪ್ಪಡಿ ಪಿಸಿಸಿ | ನೆಲ ಅಂತಸ್ತಿನ ರಾಫ್ಟ್ ಪೂರ್ಣಗೊಂಡಿದೆ | ನೆಲ ಮಹಡಿಯಿಂದ ಕಾಂಕೋರ್ಸ್‌ವರೆಗೆ ಕಾಲಮ್ (ಸಂಖ್ಯೆ) |
|---|---|---|---|---|---|---|
| ವ್ಯಾಪ್ತಿ | 205m | 108m | 55m | 205m | 205m | 92m |
| ಪೂರ್ಣಗೊಂಡಿದೆ | 205m | 84m | 45m | 127m | 107.9m | 7m |
| ಪೂರ್ಣಗೊಂಡ ಶೇಕಡಾವಾರು | 100% | 77% | 81.81% | 61.95% | 52.63% | 7.60% |







(ಮುಂದುವರೆದಿದೆ...)

# ನಿಲ್ದಾಣ ಕಾಮಗಾರಿಗಳ ಪ್ರಗತಿ

## 6 ಶೆಟ್ಟಿಹಳ್ಳಿ

| ವಿವರಣೆ | ಪ್ರಾಥಮಿಕ ಕೆಲಸಗಳು (ಆರ್‌ಎಂಟಿ) | ನೆಲ ಮಹಡಿಯ ಚಪ್ಪಡಿ ಪಿಸಿಸಿ (ಆರ್‌ಎಂಟಿ) | ನೆಲ ಮಹಡಿಯ ರಾಫ್ಟ್ ಪೂರ್ಣಗೊಂಡ ಪಿಸಿಸಿ (ಆರ್‌ಎಂಟಿ) | ತಡೆಗೋಡೆ (ಆರ್‌ಎಂಟಿ) | ನೆಲ ಮಹಡಿಯಿಂದ ಕಾಂಕೋರ್ಸ್‌ವರೆಗೆ ಕಾಲಮ್ (ಸಂಖ್ಯೆ) | ಪ್ಲಾಟ್‌ಫಾರ್ಮ್ ಗೋಡೆ |
|---|---|---|---|---|---|---|
| ವ್ಯಾಪ್ತಿ | 205 | 205 | 205 | 205 | 32 | 615 |
| ಪೂರ್ಣಗೊಂಡಿದೆ | 205 | 160.3 | 126.3 | 93.4 | 10 | 183 |
| ಪೂರ್ಣಗೊಂಡ ಶೇಕಡಾವಾರು | 100% | 78% | 61.60% | 45.56% | 31.25% | 30.73% |





## 7 ಮ್ಯಾದರಹಳ್ಳಿ

| ವಿವರಣೆ | ಪ್ರಾಥಮಿಕ ಕೆಲಸಗಳು (ಆರ್‌ಎಂಟಿ) | ನೆಲ ಮಹಡಿಯ ಚಪ್ಪಡಿ ಪಿಸಿಸಿ (ಆರ್‌ಎಂಟಿ) | ನೆಲ ಮಹಡಿಯ ರಾಫ್ಟ್ ಪೂರ್ಣಗೊಂಡ ಪಿಸಿಸಿ (ಆರ್‌ಎಂಟಿ) | ತಡೆಗೋಡೆ (ಆರ್‌ಎಂಟಿ) | ನೆಲ ಮಹಡಿಯಿಂದ ಕಾಂಕೋರ್ಸ್‌ವರೆಗೆ ಕಾಲಮ್ (ಸಂಖ್ಯೆ) | ಪ್ಲಾಟ್‌ಫಾರ್ಮ್ ಗೋಡೆ | ಸಂಯೋಜಿತ ಅಡಿಪಾಯ |
|---|---|---|---|---|---|---|---|
| ವ್ಯಾಪ್ತಿ | 205 | 93.12 | 93.12 | 205 | 32 | 1230 | 7 |
| ಪೂರ್ಣಗೊಂಡಿದೆ | 205 | 93.12 | 93.12 | 180 | 6 | 243 | 1 |
| ಪೂರ್ಣಗೊಂಡ ಶೇಕಡಾವಾರು | 100% | 100% | 100% | 88% | 19% | 20% | 14% |






## 8 ಚಿಕ್ಕಬಾಣವರ

| ವಿವರಣೆ | ಪ್ರಾಥಮಿಕ ಕೆಲಸಗಳು (ಆರ್‌ಎಂಟಿ) | ನೆಲ ಮಹಡಿಯ ಚಪ್ಪಡಿ ಪಿಸಿಸಿ (ಆರ್‌ಎಂಟಿ) | ನೆಲ ಮಹಡಿಯ ರಾಫ್ಟ್ ಪೂರ್ಣಗೊಂಡ ಪಿಸಿಸಿ (ಆರ್‌ಎಂಟಿ) | ನೆಲ ಮಹಡಿಯಿಂದ ಕಾಂಕೋರ್ಸ್‌ವರೆಗೆ ಕಾಲಮ್ (ಸಂಖ್ಯೆ) |
|---|---|---|---|---|
| ವ್ಯಾಪ್ತಿ | 205 | 205 | 205 | 11 |
| ಪೂರ್ಣಗೊಂಡಿದೆ | 205 | 95 | 80 | 1 |
| ಪೂರ್ಣಗೊಂಡ ಶೇಕಡಾವಾರು | 100% | 46.34% | 39.02% | 9.09% |






(ಮುಂದುವರೆದಿದೆ...)

# ನಿಲ್ದಾಣ ಕಾಮಗಾರಿಗಳ ಪ್ರಗತಿ

## ಕಾರಿಡಾರ್ 4/ಕನಕ ಲೈನ್: ನಿಲ್ದಾಣ ಕಾಮಗಾರಿ ಪ್ಯಾಕೇಜ್ ಗಳು C4A ಮತ್ತು C4B




ಹುಸ್ಕೂರು ನಿಲ್ದಾಣದ ಅಡಿಪಾಯ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ಕಾಲಮ್ (ಸ್ತಂಭ) ಕಾಮಗಾರಿಗಳು ಪ್ರಗತಿಯಲ್ಲಿದೆ. ಬೆಳ್ಳಂದೂರು ನಿಲ್ದಾಣದಲ್ಲಿ ಅಡಿಪಾಯ ಕಾಮಗಾರಿ 90% ಕ್ಕಿಂತ ಹೆಚ್ಚು ಪೂರ್ಣಗೊಂಡಿದೆ. ಕಗ್ಗದಾಸಪುರ, ಕಾರ್ಮೆಲರಾಮ್ ಹಾಗೂ ಸಿಂಗೆನಾಗ್ರಹಾರ ನಿಲ್ದಾಣಗಳಲ್ಲಿ ಅಡಿಪಾಯಕ್ಕಾಗಿ ಭೂಮಿ ಅಗೆಯುವ ಕಾರ್ಯ ಆರಂಭಗೊಂಡಿದೆ. ಹೀಲಲಿಗೆ ನಿಲ್ದಾಣಕ್ಕೆ ಪೈಲಿಂಗ್ ರಿಗ್ ನಿಯೋಜನೆ ಮಾಡಲಾಗಿದೆ. ಜೊತೆಗೆ ಕಾಸ್ಟಿಂಗ್ ಯಾರ್ಡ್ ಹಾಗೂ ಬ್ಯಾಚಿಂಗ್ ಪ್ಲಾಂಟ್ ಕಾಮಗಾರಿಗಳು ಸಹ ಪ್ರಗತಿಯಲ್ಲಿವೆ.

### 1 ಹೀಲಲಿಗೆ



### 2 ಸಿಂಗೆನಾಗ್ರಹಾರ



### 3 ಹುಸ್ಕೂರು



### 4 ಬೆಳ್ಳಂದೂರು ರಸ್ತೆ



### 5 ಕಗ್ಗದಾಸಪುರ



ಜಕ್ಕೂರು ನಿಲ್ದಾಣದಲ್ಲಿ ಪೈಲಿಂಗ್ ಕಾಮಗಾರಿ ನಡೆಯುತ್ತಿದ್ದು, 50% ಕೆಲಸ (ಪೈಲುಗಳು)ಪೂರ್ಣಗೊಂಡಿದೆ. ರಾಜನಕುಂಟೆ ನಿಲ್ದಾಣದಲ್ಲಿ ರಿಟೈನಿಂಗ್ ವಾಲ್ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಅಡಿಪಾಯ ಕಾಮಗಾರಿಗಳೂ ನಡೆಯುತ್ತಿವೆ. ಚನ್ನಸಂದ್ರ ನಿಲ್ದಾಣದಲ್ಲಿ ಅಡಿಪಾಯಕ್ಕಾಗಿ ಭೂಮಿ ಅಗೆಯುವ ಕಾರ್ಯ ಮತ್ತು ಹೊರಮಾವು ಹಾಗೂ ಮುಡನಹಳ್ಳಿ ನಿಲ್ದಾಣಗಳಲ್ಲಿ ಸೈಟ್ ಕ್ಲಿಯರಿಂಗ್ (ಸ್ಥಳ ಸ್ವಚ್ಛತಾ) ಕಾರ್ಯಗಳು ಪ್ರಗತಿಯಲ್ಲಿವೆ.

### 6 ಚನ್ನಸಂದ್ರ




### 7 ಜಕ್ಕೂರು



### 8 ರಾಜಾನಾಕುಂಟೆ



K RIDE



# ಕಾಮಗಾರಿಗಳ ಪ್ರಗತಿಯ ವಿವರ

## ಕಾರಿಡಾರ್ - 1

- Corridor-1 (ಸಂಪಿಗೆ ಮಾರ್ಗ)ದ ಅಲೈನ್‌ಮೆಂಟ್‌ನ್ನು (ಮೆಜೆಸ್ಟಿಕ್‌ನಿಂದ ದೇವನಹಳ್ಳಿ ವರೆಗೆ) ಭಾರತೀಯ ರೈಲ್ವೆ ಇಲಾಖೆ ಅನುಮೋದಿಸಿದೆ.
- ಅನುಮೋದಿತ ಅಲೈನ್‌ಮೆಂಟ್‌ಗೆ ಅನುಗುಣವಾಗಿ ನಿರ್ಮಾಣ ಕಾರ್ಯಗಳ ಸೈಟ್ ಸಾಧ್ಯತೆ (Site Feasibility) ಪರಿಶೀಲನೆ ನಡೆಯುತ್ತಿದ್ದು, ಮೆಜೆಸ್ಟಿಕ್ ನಿಂದ ಯಲಹಂಕ ಮತ್ತು ಯಲಹಂಕದಿಂದ ದೇವನಹಳ್ಳಿಗೆ ಎರಡು ಹಂತಗಳಲ್ಲಿ ಅನುಮೋದಿತ ಜೋಡಣೆಗೆ ಸ್ಥಳ ಕಾರ್ಯಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ.
- ಕಾರಿಡಾರ್ 1 ರ ಭಾಗವಾಗಿರುವ ವಯಾಡಕ್ಟ್ ಎಲಿವೇಟೆಡ್ ಕಾಮಗಾರಿಗಳನ್ನು (ಯಶವಂತಪುರ ಬಿಎಸ್‌ಆರ್‌ಪಿ ನಿಲ್ದಾಣದಿಂದ ಭಾರತೀಯ ರೈಲ್ವೆ ಯಾರ್ಡ್ - ತುಮಕೂರು ಬದಿಯವರೆಗೆ) ಪ್ಯಾಕೇಜ್ 1 ಕಾರಿಡಾರ್ 2 (ಮಲ್ಲಿಗೆ ಮಾರ್ಗ)ದೊಂದಿಗೆ ಕೈಗೊಳ್ಳಲಾಗುವುದು.
- ಯಶವಂತಪುರ ನಿಲ್ದಾಣವು ವಿನಿಮಯ ನಿಲ್ದಾಣವಾಗಿದ್ದು, ಒಂದೇ ಕಟ್ಟಡದೊಳಗೆ ವಿವಿಧ ಹಂತಗಳಲ್ಲಿ ಕಾರಿಡಾರ್ 1 ಮತ್ತು ಕಾರಿಡಾರ್ 2 ಅನ್ನು ಸಂಯೋಜಿಸುತ್ತದೆ ಮತ್ತು ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿವೆ.
- ಯಲಹಂಕ ನಿಲ್ದಾಣದ ಬಳಿ ಇರುವ ವಿನಿಮಯ ನಿಲ್ದಾಣವಾದ ಸಿ1 ಕಾರಿಡಾರ್ ಅನ್ನು ಸಿ4 ಕಾರಿಡಾರ್‌ನೊಂದಿಗೆ ಸಂಯೋಜಿಸಲಾಗಿದೆ. ಇನ್ನು ಸಿ4 -ಕನಕ ಲೈನ್ (ಜಕ್ಕೂರು ನಿಂದ ರಾಜನಕುಂಟೆ ನಡುವೆ) ಭೂಸ್ವಾಧೀನ ಕಾರ್ಯ ಪ್ರಗತಿಯಲ್ಲಿದ್ದು, ಶೀಘ್ರದಲ್ಲೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

## ಕಾರಿಡಾರ್ - 3

- ಕಾರಿಡಾರ್-3 ಪಾರಿಜಾತ ಲೈನ್ (ಕೆಂಗೇರಿ ನಿಂದ ವೈಟ್‌ಫೀಲ್ಡ್) ಜೋಡಣೆಗೆ ರೈಲ್ವೆ ಅನುಮೋದನೆ ನೀಡಿದೆ. ಉಳಿದ ಮೂರು (1,2,4) ಕಾರಿಡಾರ್‌ಗಳ ಭೂಸ್ವಾಧೀನ ಪೂರ್ಣಗೊಂಡ ನಂತರ ಕಾರಿಡಾರ್-3 ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

## ಪ್ರೊಕ್ಯೂರ್‌ಮೆಂಟ್

C2 ಕಾರಿಡಾರ್-ಮಲ್ಲಿಗೆ ಮಾರ್ಗ (ಬೆನ್ನಗಾನಹಳ್ಳಿಯಿಂದ ಚಿಕ್ಕಬಾಣಾವರ)
ಈ ಕೆಳಕಂಡ ವಿಭಾಗಗಳಂತೆ 3 ಪ್ಯಾಕೇಜ್‌ಗಳಲ್ಲಿ ಟೆಂಡರ್ ಆಹ್ವಾನಿಸಲಾಗಿದೆ

a) ಪ್ಯಾಕೇಜ್ 3: ಅಟ್ ಗ್ರೇಡ್ ಕಾಮಗಾರಿಗಳು: ಯಶವಂತಪುರದಿಂದ ಚಿಕ್ಕಬಾಣಾವರ
b) ಪ್ಯಾಕೇಜ್ 2: ಅಟ್ ಗ್ರೇಡ್ ಕಾಮಗಾರಿಗಳು: ಬೆನ್ನಿಗಾನಹಳ್ಳಿಯಿಂದ ಹೆಬ್ಬಾಳ
c) ಪ್ಯಾಕೇಜ್ 1: ಎತ್ತರದ ಕಾಮಗಾರಿಗಳು: ಬೆನ್ನಿಗಾನಹಳ್ಳಿಯಿಂದ ಚಿಕ್ಕಬಾಣಾವರ ನಡುವಿನ ಎಲ್ಲಾ (ಬೆನ್ನಿಗಾನಹಳ್ಳಿ, ಮತ್ತಿಕೆರೆ ಡಬಲ್ ಡೆಕ್ಕರ್ ಯಶವಂತಪುರ ಸೇರಿದಂತೆ) ಎತ್ತರದ ಕಾಮಗಾರಿಗಳು
d) ಮೇಲ್ಕಂಡ ಪ್ಯಾಕೇಜ್‌ಗಳಿಗೆ ಸಂಬಂಧಿಸಿದಂತೆ ಹಣಕಾಸು ಬಿಡ್‌ಗಳನ್ನು ತೆರೆಯಲಾಗಿದ್ದು, ಮುಂದಿನ ಪ್ರಕ್ರಿಯೆಗೆ ಅಗತ್ಯ ಅನುಮೋದನೆ ಪಡೆಯುವ ಕಾರ್ಯ ಪ್ರಗತಿಯಲ್ಲಿದೆ.

C4 ಕಾರಿಡಾರ್ - ಕನಕ ಮಾರ್ಗ (ಹೀಲಲಿಗೆಯಿಂದ ರಾಜನಕುಟೆ):
ಈ ಮಾರ್ಗಕ್ಕೆ 4 ಪ್ಯಾಕೇಜ್‌ಗಳಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲು ಯೋಜನೆ ರೂಪಿಸಲಾಗಿದೆ.

a) ಪ್ಯಾಕೇಜ್ 1-ಬೆಣ್ಣಿಗನಹಳ್ಳಿಯಿಂದ ಜಕ್ಕೂರು
b) ಪ್ಯಾಕೇಜ್ 2 ಹೀಲಲಿಗೆಯಿಂದ ಬೆಳ್ಳಂದೂರು
c) ಪ್ಯಾಕೇಜ್ 3 - ಬೆಳ್ಳಂದೂರು ನಿಂದ ಬೆನ್ನಿಗನಹಳ್ಳಿ
d) ಪ್ಯಾಕೇಜ್ 4 - ಜಕ್ಕೂರು ನಿಂದ ರಾಜನಕುಂಟೆ

ಸೋಲದೇವನಹಳ್ಳಿ BSRP ಡಿಪೋಗೆ ಸಂಬಂಧಿಸಿದ ಟೆಂಡರ್ ದಾಖಲೆಗಳ ಪರಿಶೀಲನೆ ನಡೆಯುತ್ತಿದ್ದು, ಶೀಘ್ರದಲ್ಲೇ ಆಡಳಿತಾತ್ಮಕ ಅನುಮೋದನೆ ಪಡೆಯುವ ಪ್ರಕ್ರಿಯೆಯನ್ನು ಆರಂಭಿಸಲಾಗುತ್ತದೆ.



# ಕಾರ್ಯಕ್ರಮಗಳು ಮತ್ತು ಪರಿಶೀಲನೆಗಳು









**ಬಿಎಸ್‌ಆರ್‌ಪಿ ಕಾರಿಡಾರ್-2ರ ಯೋಜನೆಯಿಂದ ಭಾದಿತ ಕುಟುಂಬಗಳಿಗೆ ಕ-ರೈಡ್‌ನಿಂದ ಸಾಮಾಜಿಕ ಭದ್ರತಾ ವಿಮಾ ಪ್ರಮಾಣಪತ್ರಗಳ ವಿತರಣೆ**

ಫೆಬ್ರವರಿ 11, 2026ರಂದು, ಕ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ ಸಿಂಗ್ ಅವರು, ಬೆಂಗಳೂರು ಉಪನಗರ ರೈಲು ಯೋಜನೆ (BSRP)ಯ ಕಾರಿಡಾರ್-2 ವ್ಯಾಪ್ತಿಯ ಯೋಜನೆ ಪರಿಣಾಮಿತ ವ್ಯಕ್ತಿಗಳು (PAPs), ಸ್ಲಂ ನಿವಾಸಿಗಳು ಹಾಗೂ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಅವಧಿ ವಿಮಾ ಪ್ರಮಾಣಪತ್ರಗಳನ್ನು ವಿತರಿಸಿದರು. ಯಶವಂತಪುರದಲ್ಲಿ ನಡೆದ ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯ ಮರುಸ್ಥಾಪನೆ ಕುರಿತ ಕಾರ್ಯಕ್ರಮದಲ್ಲಿ ಈ ಪ್ರಮಾಣಪತ್ರಗಳನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಕ-ರೈಡ್‌ನ ನಿರ್ದೇಶಕರು (ವ್ಯವಹಾರ ಅಭಿವೃದ್ಧಿ ಮತ್ತು ಹಣಕಾಸು) ಶ್ರೀ ಅವಧೇಶ್ ಮೆಹತಾ ಹಾಗೂ ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿಯ ಸಂಚಾಲಕರಾದ ಶ್ರೀ ಭಾಸ್ಕರ್ ಚಕ್ರವರ್ತಿ ಉಪಸ್ಥಿತರಿದ್ದರು.

ಇನ್ನು ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ ಸಿಂಗ್, ಮೂಲಸೌಕರ್ಯ ಅಭಿವೃದ್ಧಿಯೊಂದಿಗೆ ಸಾಮಾಜಿಕ ರಕ್ಷಣಾ ಕ್ರಮಗಳ ಏಕೀಕರಣದ ಮಹತ್ವವನ್ನು ಒತ್ತಿ ಹೇಳಿದರು. ಬೆಂಗಳೂರು ಉಪನಗರ ರೈಲು ಯೋಜನೆ (BSRP) ನಗರ ಚಲನವಲನ ಸುಧಾರಣೆ, ಸಂಚಾರ ದಟ್ಟಣೆ ಕಡಿತ, ಪ್ರಾದೇಶಿಕ ಸಂಪರ್ಕ ಹೆಚ್ಚಿಸುವ ಗುರಿಯನ್ನು ಹೊಂದಿದೆ. ಜೊತೆಗೆ, ಯೋಜನೆ ಪರಿಣಾಮಿತ ಸಮುದಾಯಗಳಿಗೆ ನ್ಯಾಯಸಮ್ಮತ ಪರಿಹಾರ, ಸಾಮಾಜಿಕ ಭದ್ರತಾ ವಿಮಾ ಹಾಗೂ ಜೀವನೋಪಾಯ ಪುನರ್ ಸ್ಥಾಪನೆಯನ್ನು ಖಚಿತಪಡಿಸುತ್ತದೆ ಎಂದು ಅವರು ತಿಳಿಸಿದರು.

ಯೋಜನೆ ಪರಿಣಾಮಿತರಿಂದ ದೊರೆತ ಸಹಕಾರವನ್ನು ಅವರು ಅಭಿನಂದಿಸಿ, ಸಾರ್ವಜನಿಕ ಹಿತದೃಷ್ಟಿಯಿಂದ ಯೋಜನೆಯನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವ ಅಗತ್ಯತೆಯನ್ನು ಪುನರುಚ್ಚರಿಸಿದರು.






ಫೆಬ್ರವರಿ 25, 2026 ರಂದು, ಕ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ ಸಿಂಗ್ ಅವರು ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್, ಬೆಂಗಳೂರು ಸೆಂಟರ್ ಆಯೋಜಿಸಿದ್ದ ಕಾಂಕ್ರೀಟ್ ಪನೋರಮಾ ಮತ್ತು ಡೆಮಿನಾರ್ 2026 ರಲ್ಲಿ "ಇಂಟಿ-ಅಟೆಡ್ ರೈಲ್ ನೆಟ್‌ವರ್ಕ್‌ನೊಂದಿಗೆ ನಾಳೆಯ ನಗರಗಳನ್ನು ನಿರ್ಮಿಸುವುದು" ವಿಷಯ ಕುರಿತು ಪ್ರಸ್ತುತಿಯನ್ನು ನೀಡಿದರು.

ಸುಸ್ಥಿರ ನಗರ ಬೆಳವಣಿಗೆ ಮತ್ತು ಭವಿಷ್ಯಕ್ಕೆ ಸಿದ್ಧವಾದ ಮೂಲಸೌಕರ್ಯವನ್ನು ಒದಗಿಸುವಲ್ಲಿ ಸಮಗ್ರ ರೈಲು ವ್ಯವಸ್ಥೆಗಳ ನಿರ್ಣಾಯಕ ಪಾತ್ರದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಲ್ಲದೆ ಕ-ರೈಡ್ ಪಾರದರ್ಶಕ ರೈಲು ಪರಿಹಾರಗಳ ಮೂಲಕ ಸ್ಥಿತಿಸ್ಥಾಪಕ, ಸಂಪರ್ಕಿತ ನಗರಗಳನ್ನು ರೂಪಿಸಲು ಬದ್ಧವಾಗಿದೆ ಎಂದು ಹೇಳಿದರು.

# ಕಾರ್ಯಕ್ರಮಗಳು ಮತ್ತು ಪರಿಶೀಲನೆಗಳು






ಫೆಬ್ರವರಿ 7, 2026 ರಂದು, ಕ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಲಕ್ಷ್ಮಣ್ ಸಿಂಗ್ ಅವರು ಬೆಂಗಳೂರಿನಲ್ಲಿ ನಡೆದ ಹಸಿರು ಕರ್ನಾಟಕ ಶೃಂಗಸಭೆ 'ಐಜಿಬಿಸಿ ಗ್ರೀನ್ ಕ್ರುಸೇಡರ್ ಅವಾರ್ಡ್ಸ್ 2026' ಸಮಾರಂಭದಲ್ಲಿ ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಿದರು. ಅಲ್ಲದೆ ಕರ್ನಾಟಕದಲ್ಲಿ ಸುಸ್ಥಿರ ಮತ್ತು ಹವಾಮಾನ-ನಿರೋಧಕ ಮೂಲಸೌಕರ್ಯವನ್ನು ಮುನ್ನಡೆಸುವಲ್ಲಿನ ನಾಯಕತ್ವಕ್ಕಾಗಿ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ, ಬಿಎಸ್‌ಆರ್‌ಪಿಯ ದೃಷ್ಟಿಕೋನ, ಅದರ 4 ಕಾರಿಡಾರ್‌ಗಳಿಗೆ ಪ್ರಾದೇಶಿಕ ಹೂವುಗಳ ಹೆಸರಿಡುವ ಹಿಂದಿನ ಚಿಂತನೆ ಮತ್ತು ಈ ಯೋಜನೆಯು ಪ್ರಯಾಣವನ್ನು ಲಕ್ಷಾಂತರ ಜನರಿಗೆ ಸುರಕ್ಷಿತ, ಪರಿಣಾಮಕಾರಿ ಮತ್ತು ಪರಿಸರ ಸ್ನೇಹಿ ಚಲನಶೀಲತೆಯಾಗಿ ಹೇಗೆ ಪರಿವರ್ತಿಸುತ್ತದೆ ಎಂಬುದರ ಕುರಿತು ಮಾಹಿತಿ ಹಂಚಿಕೊಂಡರು.








ನಾಗರಿಕ-ಕೇಂದ್ರಿತ ನಗರ ಸೌಕರ್ಯದ ಧ್ಯೇಯವಾಕ್ಯಕ್ಕೆ ಅನುಗುಣವಾಗಿ, ಕ-ರೈಡ್ ಬೆಂಗಳೂರು ಮೊಬಿಲಿಟಿ ಫೆಡರೇಶನ್ ಪಾಲುದಾರರ ಕಾರ್ಯಾಗಾರದಲ್ಲಿ ಭಾಗವಹಿಸಿತು, ನಾಗರಿಕರು ಮತ್ತು ಚಲನಶೀಲ ತಜ್ಞರೊಂದಿಗೆ ಸಮಗ್ರ ನಗರ ಸಾರಿಗೆ ಪರಿಹಾರಗಳ ಕುರಿತು ಚರ್ಚಿಸಿತು. ಈ ಸಂದರ್ಭದಲ್ಲಿ ಡಾ. ನರೇಂದ್ರ. ಜಿಎಂ (ವಿನ್ಯಾಸ ಮತ್ತು ಯೋಜನೆ), ಅವರು ಬಿಎಸ್‌ಆರ್‌ಪಿ ಕಾರಿಡಾರ್ -2 ರ ಪ್ರಗತಿಯ ಕುರಿತು ಭಾಗವಹಿಸುವವರಿಗೆ ವಿವರಿಸಿದರು, ನಂತರ ನಾಗರಿಕರ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಸಂವಾದಾತ್ಮಕ ಪ್ರಶ್ನೋತ್ತರ ಅವಧಿಯಲ್ಲಿ ಸಹ ಭಾಗವಹಿಸಿದರು.







ಫೆಬ್ರವರಿ 23, 2026 ರಂದು, ಕ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಲಕ್ಷ್ಮಣ್ ಸಿಂಗ್ ಅವರು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತರು ಶ್ರೀ ಎಂ. ಮಹೇಶ್ವರ್ ರಾವ್ ರವರೊಂದಿಗೆ ಬಿಎಸ್‌ಆರ್‌ಪಿ ಕಾರಿಡಾರ್-2 ರ ಸೇವಾನಗರ ಫ್ಲೈ-ಓವರ್ (ಅಟ್-ಗ್ರೇಡ್ ಭಾಗ) ಮತ್ತು ಮೋಹನ್ ಕುಮಾರ್ ರಸ್ತೆ, ಮತ್ತಿಕೆರೆ (ಎತ್ತರದ ಭಾಗ) ಭಾಗದಲ್ಲಿ ಜಂಟಿ ಪರಿಶೀಲನೆಯನ್ನು ನಡೆಸಿದರು. ಕಸ್ತೂರಿನಗರದ ಕಡೆಗೆ ಸೇವಾನಗರದಲ್ಲಿ-ಓವರ್ ರ‍್ಯಾಂಪ್ ಅನ್ನು ಉಲ್ಲಂಘಿಸುವ ಸಿ -2 ಅನ್ನು ಜೋಡಿಸಿ, ಮತ್ತಿಕೆರೆಯಲ್ಲಿ ವಯಾಡಕ್ಟ್ ಕಾಮಗಾರಿಗಳಿಗೆ ಪ್ರವೇಶಕ್ಕೆ ಅಡ್ಡಿಯಾಗುವ ಅಡೆತಡೆಗಳನ್ನು ತೆರವುಗೊಳಿಸುವ ಬಗ್ಗೆ ತ್ವರಿತ ಕ್ರಮ ಹಾಗೂ ವಿವಿಧ ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಅಲ್ಲದೆ ಸಾರ್ವಜನಿಕರ ಹಿತದೃಷ್ಟಿಯಿಂದ ಬಿಎಸ್‌ಆರ್‌ಪಿಯನ್ನು ಸಕಾಲಿಕವಾಗಿ ಪೂರ್ಣಗೊಳಿಸಲು ಕ-ರೈಡ್‌ನ ಎಲ್ಲಾ ಪ್ರಯತ್ನಗಳಿಗೆ ಜಿಬಿಎ ಮುಖ್ಯ ಆಯುಕ್ತರು ಸಂಪೂರ್ಣ ಬೆಂಬಲವನ್ನು ನೀಡುವುದಾಗಿ ಹೇಳಿದರು.

# ಸಾಮಾಜಿಕ ಮತ್ತು ಪರಿಸರ ನಿರ್ವಹಣೆ

## ಸಾಮಾಜಿಕ ಉಪಕ್ರಮಗಳು

ಸಾಮಾಜಿಕ-ಪರಿಸರ ಮೇಲ್ವಿಚಾರಣಾ ಘಟಕ (SEMU)ವು ಸಾಮಾಜಿಕ ಭದ್ರತಾ ಕ್ರಮಗಳು, ಪರಿಹಾರ ಪ್ರಕ್ರಿಯೆ, ಪರಿಸರ ಅನುಪಾಲನೆ ಹಾಗೂ ಸುರಕ್ಷತಾ ಮೇಲ್ವಿಚಾರಣೆ ಸಂಬಂಧಿತ ಸಂಯೋಜಿತ ಪ್ರಯತ್ನಗಳ ಮೂಲಕ ಯೋಜನೆಯ ಪ್ರಗತಿಗೆ ನಿರಂತರವಾಗಿ ಸಹಕಾರ ನೀಡುತ್ತಿದೆ. ಕಾರಿಡಾರ್-2 ಮತ್ತು ಕಾರಿಡಾರ್-4ಗಳಲ್ಲಿ ರಚನಾ ಮೌಲ್ಯಮಾಪನ ಹಾಗೂ ಪರಿಹಾರ ಮತ್ತು ಪುನರ್ವಸತಿ (C&R) ಚಟುವಟಿಕೆಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ. ಹೆಚ್ಚಿನ ರಚನೆಗಳ (ಸ್ಟ್ರಕ್ಚರಲ್) ಮೌಲ್ಯಮಾಪನ ಪೂರ್ಣಗೊಂಡಿದ್ದು, ಅನೇಕ ಪರಿಹಾರ ಪ್ರಕರಣಗಳನ್ನು ಪ್ರಕ್ರಿಯೆಗೊಳಿಸಲಾಗಿದೆ.

ಹಕ್ಕುದಾರರು ಹಾಗೂ ಹಕ್ಕು ರಹಿತರಾದವರ (ನಾನ್-ಟೈಟಲ್ ಹೋಲ್ಡರ್ಸ್) ದಾಖಲೆ ಸಂಗ್ರಹಣೆ ಮತ್ತು ಪರಿಶೀಲನೆ ಕಾರ್ಯಗಳಲ್ಲಿ ಸಾಕಷ್ಟು ಪ್ರಗತಿ ಕಂಡುಬಂದಿದೆ. ಆರ್ಥಿಕ ಒಳಗೊಳ್ಳುವಿಕೆ ಬೆಂಬಲದ ಮೂಲಕ ಪರಿಣಾಮಿತರಾದ ಅಕ್ರಮ ನಿವಾಸಿಗಳಿಗೆ ಶೂನ್ಯ ಶಿಲ್ಕಿನ ಬ್ಯಾಂಕ್ ಖಾತೆಗಳನ್ನು ತೆರೆಯಲು ಹಾಗೂ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಪಡೆಯಲು ಸಹಕಾರ ನೀಡಲಾಗಿದೆ. ಈ ಪ್ರಯತ್ನಗಳಿಂದ ಹಲವಾರು ಅಕ್ರಮ ವಾಸಸ್ಥರು/ಜೋಪಡಿ ನಿವಾಸಿಗಳು ಸ್ವಯಂಪ್ರೇರಿತವಾಗಿ ಸ್ಥಳಾಂತರಗೊಂಡು, ಯೋಜನೆಗೆ ಇದ್ದ ಅಡ್ಡಿಗಳನ್ನು ತೆರವುಗೊಳಿಸಿ ನಿರ್ಮಾಣ ಕಾರ್ಯಗಳಿಗೆ ಭೂಮಿ ಹಸ್ತಾಂತರಿಸಲು ಅನುಕೂಲವಾಗಿದೆ.

ಇದಲ್ಲದೆ, ಕ-ರೈಡ್ ಸಂಸ್ಥೆಯು ಸಾರ್ವಜನಿಕ ಸಮಾಲೋಚನೆಗಳು, ಜಾಗೃತಿ ಕಾರ್ಯಕ್ರಮಗಳು ಹಾಗೂ ಯೋಜನೆಯಿಂದ ಪರಿಣಾಮಿತರಾದವರಿಗೆ ಜೀವನೋಪಾಯ ಅಭಿಮುಖೀಕರಣ ಕಾರ್ಯಕ್ರಮಗಳ ಮೂಲಕ ಹಿತಾಸಕ್ತಿದಾರರ ಸಂವಹನವನ್ನು ಮತ್ತಷ್ಟು ಬಲಪಡಿಸಿದೆ. ಪರಿಸರ ಹಾಗೂ ಸುರಕ್ಷತಾ ಉಪಕ್ರಮಗಳ ಅಡಿಯಲ್ಲಿ ನಿಯಮಿತ ಸಭೆಗಳು, ಕಾರ್ಮಿಕ ಶಿಬಿರಗಳು ಮತ್ತು ಕಾಮಗಾರಿ ಸ್ಥಳಗಳ ಪರಿಶೀಲನೆಗಳು, ರಸ್ತೆ ಸುರಕ್ಷತಾ ವಾರ ಹಾಗೂ ಪರಿಸರ ಸಂರಕ್ಷಣಾ ತರಬೇತಿ ಮುಂತಾದ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರಲಾಗಿದೆ.

ಇನ್ನು ಅರಣ್ಯ ಅನುಮತಿಗಳು, ಪರಿಹಾರಾತ್ಮಕ ಅರಣ್ಯೀಕರಣ, ಮರಗಳ ಸ್ಥಳಾಂತರ ಹಾಗೂ ಪರಿಸರ-ಆರೋಗ್ಯ-ಸುರಕ್ಷತಾ (EHS) ಮಾನದಂಡಗಳ ಮೇಲ್ವಿಚಾರಣೆ ಸೇರಿದಂತೆ ವಿವಿಧ ಅನುಪಾಲನಾ ಚಟುವಟಿಕೆಗಳನ್ನು ಕೈಗೊಳ್ಳಲಾಗಿದ್ದು, ಯೋಜನೆ ಅನುಷ್ಠಾನವು ಪರಿಸರ ನಿಯಮಾವಳಿ ಹಾಗೂ ಕಾರ್ಮಿಕರ ಸುರಕ್ಷತಾ ಅಗತ್ಯಗಳಿಗೆ ಅನುಗುಣವಾಗಿರುವಂತೆ ಕ್ರಮ ವಹಿಸಲಾಗಿದೆ.


ತುರ್ತು ಪರಿಸ್ಥಿತಿ ಸಿದ್ಧತೆ ಮತ್ತು ಪ್ರತಿಕ್ರಿಯೆ


ಪ್ರಥಮ ಚಿಕಿತ್ಸಾ ತರಬೇತಿ


ಸೇವಾನಗರ ಸಾರ್ವಜನಿಕ ಸಮಾಲೋಚನೆ


ಸುರಕ್ಷತೆ ಆರೋಗ್ಯ ಮತ್ತು ಪರಿಸರ (SHE) ಸಭೆ


ಸುರಕ್ಷತಾ ತರಬೇತಿ

## ಪರಿಹಾರ ಅರಣ್ಯೀಕರಣ

ಸುಸ್ಥಿರ ಮೂಲಸೌಕರ್ಯ ಮತ್ತು ಪರಿಸರ ಸಂರಕ್ಷಣೆಗೆ ತನ್ನ ಬದ್ಧತೆಯ ಭಾಗವಾಗಿ, ಕ-ರೈಡ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸಹಯೋಗದೊಂದಿಗೆ ಎನ್‌ಪಿಕೆಎಲ್ ಲೇಔಟ್‌ನ 8 ಬ್ಲಾಕ್‌ಗಳಲ್ಲಿ 30,000 ಸಸಿಗಳನ್ನು ಮತ್ತು ನೈಸ್ ರಸ್ತೆಯ ಹೊರವಲಯ, ಜಿಕೆವಿಕೆ ಜೀವವೈವಿಧ್ಯ ಉದ್ಯಾನವನ, ಬೊಮ್ಮನಹಳ್ಳಿ ಲೇಔಟ್ ಪ್ರದೇಶದಲ್ಲಿ 57,000 ಸಸಿಗಳನ್ನು ನೆಡುವ ಮೂಲಕ ದೊಡ್ಡ ಪ್ರಮಾಣದ ಪರಿಹಾರ ಅರಣ್ಯೀಕರಣವನ್ನು ಕೈಗೊಂಡಿದೆ. ಬೃಹತ್ ಬೆಂಗಳೂರು ಮಹಾ-ನಗರ ಪಾಲಿಕೆ (ಬಿಬಿಎಂಪಿ) ಮತ್ತು ಇದೀಗ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಅರಣ್ಯೀಕರಣಕ್ಕೆ ಕೈಜೋಡಿಸಿದೆ.

ಬಿಡಿಎ-ಅರಣ್ಯ ವಿಭಾಗದ ಅಧಿಕಾರಿಗಳ ಸಂಪೂರ್ಣ ಬೆಂಬಲ ಮತ್ತು ಉತ್ಸಾಹಭರಿತ ವಿಧಾನದೊಂದಿಗೆ ಮಿಯಾವಾಕಿ ಅರಣ್ಯದಲ್ಲಿ ಬಂಜರು ಭೂಮಿಯ ಒಂದು ಭಾಗವನ್ನು ಅಭಿವೃದ್ಧಿಪಡಿಸಲು KRIDE ಹೆಚ್ಚುವರಿ ಮೈಲಿ ದೂರ ಸಾಗಿದೆ. ಮಿಯಾವಾಕಿಯ ಅಭಿವೃದ್ಧಿಯು ಸುಮಾರು 3 ಹೆಕ್ಟೇರ್‌ಗಳಲ್ಲಿ ಹರಡಿಕೊಂಡಿದ್ದು, ಪರಿಸರ-ಗಮನಾರ್ಹ ಮತ್ತು ಅಪರೂಪದ, ಅಳಿವಿನಂಚಿನಲ್ಲಿರುವ ಮತ್ತು ಜೀವ ಬೆದರಿಕೆಗೆ ಒಳಗಾದ (RET) ಪ್ರಭೇದಗಳನ್ನು ಒಳಗೊಂಡಂತೆ ಸುಮಾರು 30,000 ಸ್ಥಳೀಯ ಜನಾಂಗೀಯ ಔಷಧೀಯ ಮತ್ತು ಸ್ಥಳೀಯ ಸಸ್ಯವರ್ಗಗಳನ್ನು ಹೊಂದಿದೆ. ಇವುಗಳನ್ನು ಜೀವವೈವಿಧ್ಯ-ಸಮೃದ್ಧ ನಗರ ಗ್ರೀನ್ ಲಂಗ್ ಸ್ಪೇಸ್ ಮತ್ತು ಜಲಾನಯನ ಪ್ರದೇಶ, ಜಲಮೂಲಗಳ ಪುನಃಸ್ಥಾಪನೆ, ನೀರಿನ ಮರುಬಳಕೆ ಮತ್ತು ಅಂತರ್ಜಲ ಪುನರ್ಭರ್ತಿ ರಚನೆಯನ್ನು ಸಂಯೋಜಿಸುವ ಪರಿಸರ-ತಾರ್ಕಿಕ ಪುನಃಸ್ಥಾಪನೆಯ ಪ್ರತಿಕೃತಿ ಮಾದರಿಯಾಗಿ ಸೇರಿಸಲಾಗುತ್ತದೆ. ಈ ಚಟುವಟಿಕೆಗಳು ನಗರ ಚಲನಶೀಲತಾ ಯೋಜನೆಯನ್ನು ಅಭಿವೃದ್ಧಿಪಡಿಸುವುದಲ್ಲದೆ, ಪ್ರಕೃತಿ ಆಧಾರಿತ ಪರಿಹಾರಗಳೊಂದಿಗೆ ಕೈಜೋಡಿಸುವುದನ್ನು ಪರಿಗಣಿಸುವ K-RIDE ನ ಸಹಿಷ್ಣುತೆ ಮತ್ತು ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಮಿಯಾವಾಕಿ ಪ್ಲಾಂಟೇಶನ್ ಜಪಾನಿನ ಸಸ್ಯಶಾಸ್ತ್ರಜ್ಞರು ಅಭಿವೃದ್ಧಿಪಡಿಸಿದ ಅರಣ್ಯೀಕರಣ ತಂತ್ರವಾಗಿದೆ

ಮಿಯಾವಾಕಿ ವಿಧಾನವು ಸ್ಥಳೀಯ ಪ್ರಭೇದಗಳ ಬಳಕೆ, ಹೆಚ್ಚಿನ ಸಾಂದ್ರತೆಯ ತೋಟ, ಬಹು-ಪದರದ ರಚನೆ, ಮಣ್ಣಿನ ತಯಾರಿಕೆ, ಕನಿಷ್ಠ ನಿರ್ವಹಣೆಯ ತತ್ವಗಳನ್ನು ಆಧರಿಸಿದೆ.







